“ಐದು ಪಿಜ್ಜಾ, ಅದೂ ಬೇರೆ ಬೇರೆ ಕಡೆಯಿಂದ ತರಿಸಿಕೊಂಡ ಉದ್ದೇಶ? ಅದು ಕತೆಗೆ ಬೇಕಾಗುವ ಪಾಯಿಂಟ್.”

“ಅದು ಬೇರೆ ಬೇರೆ ಕಡೆಯಿಂದ ತರಿಸಿದ್ದು ಅಂತಾ ನಾನು ಹೇಳೇ ಇಲ್ಲವಲ್ಲ ಸಾರ್...”

ಒಂದು ಕ್ಷಣ ತಾನೇನು ತಪ್ಪು ಮಾಡಿದೆ ಎಂಬುದು ಅರಿವಾಯಿತು ಕಾಮತ್‌ಗೆ. ಆದರೂ ಸಾವರಿಸಿಕೊಂಡು, “ಬೇರೆ ಬೇರೆ ಕಡೆಯಿಂದ ಅಂತಾ ಇದ್ದರೆ ಸಸ್ಪೆನ್ಸ್ ಚೆನ್ನಾಗಿರುತ್ತೆ ಅಂದುಕೊಂಡು ಕೇಳಿದೆ ಅಷ್ಟೇ...” ಎಂದ.

“ಅದೂ ಸರಿ ಅನ್ನಿ... ನಮಗೆ ಕೊಲೆ ಹೇಗೆ ನಡೆಯಿತು, ಯಾರು ಮಾಡಿದರು ಎನ್ನುವುದರ ಬಗ್ಗೆ ಗೊತ್ತಿಲ್ಲ. ಇನ್ನು ನೀವು ನಿಮ್ಮ ಆಲೋಚನಾ ಶಕ್ತಿ ಉಪಯೋಗಿಸಿ ಹೇಳಿದರೆ, ಸಾರಿ ಬರೆದರೆ ಒಳ್ಳೆಯದು. ನೀವು ನಿಮ್ಮ ಕತೆಯಲ್ಲಿ ಕೊಲೆಗಾರನನ್ನು ಉಳಿಸಲು ಪ್ರಯತ್ನಿಸುವುದಾದರೆ ನಾನು ಪೊಲೀಸ್ ಬುದ್ಧಿ ಉಪಯೋಗಿಸಿ ಬಚಾವ್ ಮಾಡುವ ಬಗ್ಗೆ ಹೇಳುತ್ತೇನೆ. ಆಗ ಇಡೀ ಕತೆ ಸತ್ಯಾಂಶಕ್ಕೆ ಹತ್ತಿರ ಇರುವಂತೆ ಅನ್ನಿಸುತ್ತದೆ.” ಕಾಮತ್ ತಲೆ ಎತ್ತಿ ನಾಗರಾಜಯ್ಯನೆಡೆ ನೋಡಿದ. ಮತ್ತೆ ಕಣ್ಣುಗಳು ಸಂಧಿಸಿದವು. ಈ ಬಾರಿಯ ನೋಟ ತೀಕ್ಷ್ಣವಾಗಿತ್ತು. ಅವನ ಕಣ್ಣುಗಳು ತನ್ನ ಇಡೀ ಶಕ್ತಿಯನ್ನೇ ಎಳೆದುಕೊಂಡು, ತನ್ನ ಆಲೋಚನಾ ಶಕ್ತಿಯನ್ನೇ ಸೆಳೆದುಕೊಳ್ಳುತ್ತಿದ್ದಾನೇನೋ ಎನಿಸಿತು. ನಿಜವಾ ಅಥವಾ ಕುಡಿದ ನಶೆಯಾ ತಿಳಿಯಲಾಗದೇ ಸುಮ್ಮನೆ ಕುಳಿತ.

“ಸಾರ್, ಬರೆಯಿರಿ ಸಾರ್. ಮೂಡಿದ್ದಾಗ ಬರೆದು ಮುಗಿಸಬೇಕು. ನಾನೂ ಹೊರಡುತ್ತೇನೆ. ಸಮಯ ಮೀರುತ್ತಿದೆ. ಬೇಗಬೇಗ ಬರೆಯಿರಿ ...”

ಅವನ ಮಾತುಗಳಿಂದ ವಾಸ್ತವಕ್ಕೆ ಬಂದ ಕಾಮತ್, “ನನ್ನ ತಲೆಯಲ್ಲಿ ಈ ರೀತಿ ಕೊಲೆ

